**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.263/18**

**ಸಿ.ಡಬ್ಲ್ಯೂ-13 ಪಿ.ಡಬ್ಲ್ಯೂ-11**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಶೋಕ |
| ತಂದೆಯ/ ಗಂಡನ ಹೆಸರು | : | ಚಿಕ್ಕಹನುಮಂತಯ್ಯ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಪಿ.ಐ , |
| ವಾಸ ಸ್ಥಳ | : | ಮೈಸೂರು |

**ದಿನಾಂಕ 00.00.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2016 ರಿಂದ 2019 ರವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 21.03.2017 ರಂದು ಈ ಕೇಸಿನ ಕಡತವನ್ನು ಚಾಸಾ 12 ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ರವರು ತೋರಿಸಿದ ಜಾಗದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಮಧ್ಯಾಹ್ನ 11 ರಿಂದ 12 ವರೆಗೂ ಮಹಜರ ಕ್ರಮ ಜರುಗಿಸಿರುತ್ತೇನೆ, ಚಾಸಾ 2 ರವರು 2 ಮಚ್ಚು ಮತ್ತು 1 ದೊಣ್ಣೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ಸ್ ಆಗಿ ಠಾಣಾ ಮಾಲುಪಟ್ಟಿ ಸಂಖ್ಯೆ 49/2017 ರಲ್ಲಿ ಅಳವಡಿಸಿಕೊಂಡಿರುತ್ತೇನೆ.

ಚಾಸಾ 1 ರವರ ಮರು ಹೇಳಿಕೆ ಮತ್ತು ಚಾಸಾ 2, 6 ಮತ್ತು 8 ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ದಿಃ27.03.2017 ರಂದು ಆರೋಪಿ 7 ರವರಿಗೆ ಸಂಬಂಧಿಸಿದ ಶಾಲಾ ದಾಖಲಾತಿಗಳನ್ನು ಚಾಸಾ 10 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿಃ12.05.2017 ರಂದು ಚಾಸಾ 3 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 1 ರಿಂದ 3 ರವರ ಗಾಯದ ಪ್ರಮಾಣ ಪತ್ರ ಪಡೆಯಲು ನಿವೇದನೆ ಸಲ್ಲಿಸಿರುತ್ತೇನೆ. ದಿಃ28.01.2018 ಚಾಸಾ 1 ರಿಂದ 3 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ 11 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತರ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ. ನಿಪಿ 1 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 1 ಡಿ, ನಿಪಿ 5 ರಿಂದ 7 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 5 ಬಿ ರಿಂದ 7 ಬಿ, ಆರೋಪಿ 7 ರವರ ಹಾಜರಾತಿ ವಿವರ ಕೋರಿ ನೀಡಿದ ನಿವೇದನೆಯನ್ನು ನಿಪಿ 11 ಮತ್ತು ಸಾಕ್ಷಿ ಸಹಿಯನ್ನು ನಿಪಿ 11 ಎ, ದೃಡೀಕರಣ ಪತ್ರವನ್ನು ನಿಪಿ 12, ಸಾಕ್ಷಿ ಸಹಿಯನ್ನು ನಿಪಿ 12 ಎ, ಆರೋಪಿ 7 ರವರು ಶಾಲೆಗೆ ನೀಡಿದ ಅರ್ಜಿಯನ್ನು ನಿಪಿ 13 ಮತ್ತು ಸಾಕ್ಷಿ ಸಹಿಯನ್ನು 13 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ**

ಪಂಚರಿಗೆ ಪಂಚನಾಮೆಗೆ ಹಾಜರಾಗಲು ಲಿಖಿತವಾಗಿ ನೋಟಿಸ್ ಕೊಟ್ಟಿರುವುದಿಲ್ಲ,, ಮೌಖಿಕವಾಗಿ  ತಿಳಿಸಿರುತ್ತೇನೆ. ಚಾಸಾ 3 ಮತ್ತು 4 ರವರಿಗೆ ದೂರವಾಣಿ ಮೂಲಕ ತಿಳಿಸಿ ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ಮಹಜರ ಕ್ರಮ ಜರುಗಿಸಲು ನಾನು ಮತ್ತು ನಮ್ಮ ಸಿಬ್ಬಂದಿ ಹೋಗಿರುತ್ತೇವೆ. ಕೃತ್ಯ ನಡೆದ ಸ್ಥಳವನ್ನು ಚಾಸಾ 2 ರವರು ತೋರಿಸಿರುತ್ತಾರೆ.  ಸದರಿ ಜಮೀನಿನಲ್ಲಿ ಆ ಸಮಯದಲ್ಲಿ ಯಾವುದೇ ಬೆಳೆ ಬೆಳೆದಿರಲಿಲ್ಲ. ಸದರಿ ಜಮೀನು ಯಾರಿಗೆ ಸೇರಿದೆ ಎಂದು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಚಾಸಾ 1 ರವರ ತಾತ ನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳಕ್ಕೆ ಹಿರೇಹಳ್ಳಿ ಗ್ರಾಮದ ಮೂಲಕ ಹೋಗಿರುತ್ತೇನೆ. ಸದರಿ ಗ್ರಾಮದ ಜನರನ್ನು ಪಂಚನಾಮೆ ಜರುಗಿಸಲು ಕೋರಿರುತ್ತೀರಾ ಎಂದರೆ ಆ ಸಮಯದಲ್ಲಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಸದರಿ ಜಾಗದಲ್ಲಿ ಮರ ಕಡಿಯುತ್ತಿದ್ದರು ಎಂದು ದೂರಿನಲ್ಲಿ ನಮೂದಿಸಿದ್ದು ಸದರಿ ಮರಕ್ಕೆ ಸಂಬಂಧಿಸಿದ ಯಾವುದಾದರೂ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೀರಾ ಎಂದರೆ ಮರ ಕಡಿಯಲು ಪ್ರಯತ್ನಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ದೂರಿನಲ್ಲಿ ಮರ ಕಡೆದು ಟ್ರಾಕ್ಟರ್ ನಲ್ಲಿ ತುಂಬಿಕೊಂಡು

ಹೋಗುತ್ತಿದ್ದರು ಎಂದು ಹೇಳಿದ್ದು, ಸದರಿ ಟ್ರಾಕ್ಟರ್ ನ್ನು ಅಮಾನತ್ತುಪಡಿಸಿಕೊಂಡಿದ್ದೀರಾ ಎಂದರೆ ಆ ರೀತಿ ದೂರಿನಲ್ಲಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ಮುದ್ದೆಮಾಲುಗಳ ಮೇಲೆ ಪಂಚರ ಸಹಿ ಪಡೆದಿರುತ್ತೇನೆ. ಸದರಿ ದಿನ ಸ್ಥಳಕ್ಕೆ ಹೋಗಿರುವುದಿಲ್ಲ, ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮರು ಹೇಳಿಕೆ ಸಮಯದಲ್ಲಿ ಆರೋಪಿ 7 ರವರು ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ ಎಂದು ಹೇಳಿರುತ್ತಾರೆ ಎಂದು ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಯಾವುದೇ ಸಾಕ್ಷಿಗಳ ಹೇಳಿಕೆ ದಾಖಲು ಮಾಡಿಕೊಳ್ಳದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಯಾವುದೇ ಸಾಕ್ಷಾದಾರ ಇಲ್ಲದೇ ಇದ್ದರುೂ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**